'ತಮ್ಮ ಶ್ರೇಯೋಭಿವೃದ್ಧಿಗೆ ಹೇಗೇಗೆಲ್ಲಾ ಮಲ್ಲಿಕಾರ್ಜುನ ಐನೋರು ಕಾರಣರಾಗಿದ್ದಾರೆ, ಅವರ ಮಾತು ತಾವು ಯಾವತ್ತೂ ಮೀರಿದ್ದೇ ಇಲ್ಲ, ಐನೋರು ಹೇಳಿದ ಭವಿಷ್ಯದಿಂದಲೇ ತಾನು ವ್ಯವಹಾರ ಶುರು ಮಾಡಿ ಯಶಸ್ವಿಯಾಗಿ ಇಷ್ಟು ದುಡಿದಿರೋದು, ಈಗಲೂ ನಿಮ್ಮ ಮೊಮ್ಮಗಳ ಜಾತಕ ಅವರಿಗೆ ಕಳಿಸಿ ಅವರು ಇಬ್ಬರ ಜಾತಕ ಹೊಂದುತ್ತೆ ಎಂದ ಮೇಲೆ ಬಂದಿದ್ದು' ಎಂದೆಲ್ಲಾ ತಿಳಿಸಿದರು.

ಸುನಂದಾಗೆ ತನ್ನಣ್ಣ ಬಹಳ ವರ್ಷ ಹಿಂದೆ ಹೇಳಿದ್ದು ನೆನಪಾಗಿತ್ತು, ಮಲ್ಲಿಕಾರ್ಜುನ ಹಾಸನ, ಬೆಂಗಳೂರು, ಮೈಸೂರು ಇನ್ನೂ ತುಂಬಾ ಊರುಗಳಲ್ಲಿ ಯಾವ್ಯಾವುದೋ ಹೋಟೆಲುಗಳಲ್ಲಿ ಉಳ್ಕೊಂಡು ಜ್ಯೋತಿಷ ಹೇಳ್ತಾನೆ, ಅದೇನೋ ಪಂಚಾಂಗ, ಕವಡೆ, ರುದ್ರಾಕ್ಷಿ ಎಲ್ಲಾ ಇಟ್ಟುಕೊಂಡು ಜನಕ್ಕೆ ಮಂಕುಬೂದಿ ಎರುಚ್ತಿದ್ದಾನೆ ಅಂತೆಲ್ಲಾ ಹೇಳಿದ್ದ. ಶೇಖರನಿಗೆ ತನ್ನಪ್ಪ ಹೀಗೇಕೆ ಅಂತಾ ಅರ್ಥವೇ ಆಗದಿದ್ದರೂ, ಜ್ಯೋತಿಷ, ರೇಸು, ರಿಯಲ್ ಎಸ್ಟೇಟು ಹಿಂಗೆ ಹತ್ತು ಹಲವು ತರಹ ದುಡ್ಡು ಮಾಡಿ ಅದನ್ನೆಲ್ಲಾ ಹೇಗೇಗೋ ಖರ್ಚು ಮಾಡಿ ಕೈ ಖಾಲಿಯಾದಾಗ ಮನೆ ಕಡೆ ಬಂದು ಸಿಕ್ಕಷ್ಟು ದುಡ್ಡು ಕಿತ್ತುಕೊಂಡು ಹೋಗುತ್ತಾನೆ ಎಂದು ಮಾತ್ರ ಗೊತ್ತಿತ್ತು, ಆದರೆ ಅವನ ಮಾತು ಇಷ್ಟು ದೊಡ್ಡ ಜನ ಕೇಳುತ್ತಾರೆ, ಇಷ್ಟೆಲ್ಲಾ ಮರ್ಯಾದೆ ಕೊಡುತ್ತಾರೆ ಎನ್ನುವುದು ನಂಬೋಕೆ ಆಗ್ತಿಲ್ಲಾ. ಅನಿವಾರ್ಯವಾಗಿ ಗಂಡಿನ ಕಡೆಯವರು ಮಲ್ಲಿಕಾರ್ಜುನನ ಬಗ್ಗೆ ಆಡಿದ ಮಾತುಗಳಿಗೆಲ್ಲಾ ತಲೆ ಆಡಿಸಿ ಕಳಿಸಿಕೊಟ್ಟಿದ್ದ ಶೇಖರ.

ಎರಡೂ ಕಡೆಯವರೂ ಒಪ್ಪಿ, ಹುಡುಗ ಹುಡುಗಿನೂ ಒಪ್ಪಿಕೊಂಡದ್ದು ಎಲ್ಲರಿಗೂ ಸಮಾಧಾನವಾಗಿದ್ದರೂ, ಹುಡುಗನ ತಂದೆ 'ಮಲ್ಲಿಕಾರ್ಜುನ ಐನೋರೆ ಮುಂದೆ ನಿಂತು ಎಲ್ಲಾ ಶಾಸ್ತ್ರಗಳು ಸರಿಯಾಗಿ ಆಗೋ ತರ ನೋಡ್ಕೋಬೇಕು ಅನ್ನೋದೆ ನಮ್ಮಾಸೆ' ಅಂದಾಗ ಶೇಖರ, ಸುನಂದಾ ಪೆಚ್ಚಾಗಿದ್ದರು. ಅವನನ್ನು ಕರೆಸೋದು ಹೇಗೆ, ಸುಮ್ಮನೆ ಕರೆದರೆ ಬರಬಹುದೇ, ನೂರೆಂಟು ನಾಟಕಗಳಾಡಿ ದುಡ್ಡು ಕೀಳಲು ನೋಡುತ್ತಾನೆ. ಮದುವೆ ಖರ್ಚು ಕಷ್ಟವಾಗಿರುತ್ತೆ ಅದರ ಜೊತೆ ಅವನನ್ನು ಕರೆಸೋದು ಇನ್ನಷ್ಟು ಖರ್ಚಾಗಬಹುದೇನೊ ಎನಿಸಿತ್ತು. ಸವಿತಾ ಮಾತ್ರ ಮಗಳಿಗೆ ಈ ಸಂಬಂಧ ತಪ್ಪಲೇಬಾರದೆಂದು ಯೋಚಿಸಿ, ಮಾವನ ಕಾಲು ಹಿಡಿದಾದರೂ ಕರೆತರಬೇಕೆಂದು ಗಂಡನಿಗೆ ಹೇಳಿಬಿಟ್ಟಳು. ಸುನಂದಾಳಿಗಂತೂ ಅದೆಂಗೆ ಇದುವರೆಗೆ ಯಾವ ಜವಾಬ್ದಾರಿಯನ್ನೂ ನಿಭಾಯಿಸದ ತನ್ನ ಗಂಡನಿಗೆ ಇಷ್ಟು ವರ್ಷಗಳಾದ ಮೇಲೆ ತನ್ನ ಮನೆಯಲ್ಲಿ ಇಷ್ಟು ಮಹತ್ವ ಸಿಗ್ತಾ ಇದೆ ಅನ್ನೋದೆ ದೊಡ್ಡ ಆಶ್ಚರ್ಯ. ಮಲ್ಲಿಕಾರ್ಜುನ ಮದುವೆಗೆ ಬಂದರೂ ಬರದಿದ್ದರೂ ತನಗೇನೂ ವ್ಯತ್ಯಾಸವಾಗುವುದಿಲ್ಲ, ಅವನು ನನ್ನ ಕಣ್ಮುಂದೆ ಬಾರದಿದ್ದರೇ ಸಾಕು ಎಂದುಕೊಂಡು ಆ ವಿಷಯಕ್ಕೆ ತಲೆಯೇ ಹಾಕದೇ, ಮೊಮ್ಮಗಳ ಮದುವೆ ತಯಾರಿಯಲ್ಲಿ ವ್ಯಸ್ಥಳಾದಳು.

ಮದುವೆಗೆ ಹದಿನೈದು ದಿನ ಮೊದಲೇ ಶೇಖರನೂ, ಸುನಂದಾಳ ಅಣ್ಣನೂ ಮಲ್ಲಿಕಾರ್ಜುನ ಹಾಸನದಲ್ಲಿ ಇರುವುದನ್ನು ಪತ್ತೆಹಚ್ಚಿ ಆಮಂತ್ರಣ ಪತ್ರಿಕೆ ಹಿಡಿದು ಹೋಗಿದ್ದರು. ಮೊದಲಿನ ದೌಲತ್ತು, ಶೋಕಿ, ಬಡಾಯಿ ಕೊಚ್ಚುವುದು ಒಂದಷ್ಟೂ ಕಡಿಮೆಯಾಗಿಲ್ಲದ ಮಲ್ಲಿಕಾರ್ಜುನ ಮಗ ಮತ್ತು ಬಾವ ಹುಡುಕಿ ಬಂದಾಗ ಅಂತಾ ಗಂಡನ್ನು ಶೇಖರನ ಮಗಳಿಗೆ ತಾನೇ ಕೊಡಿಸಿದ್ದು ತನ್ನ ಮಾತು ಕೇಳೇ ಅವರು ಆ ಹುಡುಗಿ ಒಪ್ಪಿದ್ದು ಎಂದೆಲ್ಲಾ ಒಂದರ್ಧ ಗಂಟೆ ಕೊರೆದಿದ್ದ. ಶೇಖರನೂ ಕೇಳುವವರೆಗೆ ಕೇಳಿ, ತನಗಿಷ್ಟವಿಲ್ಲದಿದ್ದರೂ ಆಮಂತ್ರಣ ಪತ್ರಿಕೆ ತೆಗೆದು ಮಲ್ಲಿಕಾರ್ಜುನನ ಹೆಸರಲ್ಲೇ ಹಾಕಿಸಿದ್ದನ್ನೂ ತೋರಿಸಿ, ಮದುವೆಗೆ ಹಿಂದಿನ ದಿನವೇ ನೇರವಾಗಿ ಛತ್ರಕ್ಕೇ ಬರಬೇಕು ಎಂದು ಕರೆದನು. ಸುನಂದಾಳ ಅಣ್ಣನೂ ಇಷ್ಟು ವರ್ಷ ಯಾವ ಜವಾಬ್ದಾರಿ ತೆಗೆದುಕೊಳ್ಳದೆ ಮನೆಗೆ ಮಾರಿ ಆಗಿದ್ದವನು ಅಪರೂಪಕ್ಕೆ ಒಂದು ಒಳ್ಳೆ ಕೆಲಸ ಮಾಡಿದ್ದೀಯ, ಬೀಗರು ಹೇಳಿದಂತೆ ಮದುವೆಯಲ್ಲಿ ಮುಂದೆ ಕಾಣಿಸಿಕೊಂಡು, ಚನ್ನಾಗಿ ಉಂಡು ತಿಂದು ಹೊರಡುವಂತೆ ಬಂದುಬಿಡು, ಬಾರದೇ ಇದ್ದು ಮೊಮ್ಮಗಳ ಜೀವನಕ್ಕೆ ಮುಳ್ಳಾಗಬೇಡ ಎಂದೆಲ್ಲಾ ಬುದ್ಧಿ ಹೇಳಿ, ಬಲವಂತವಾಗಿ ಅವನ ಮೊಬೈಲ್ ನಂಬರ್ ತೆಗೆದುಕೊಂಡು ಹೊರಡುವಷ್ಟರಲ್ಲಿ ಆಶ್ಚರ್ಯಕರವಾಗಿ ಮಲ್ಲಿಕಾರ್ಜುನ ಶೇಖರನಿಗೆ ಮಗಳ ಮದುವೆಗೆ ಏನಾದರೂ ದುಡ್ಡು ಕಡಿಮೆ ಬಿದ್ದಿದ್ದರೆ ಹೇಳು, ಬೀಗರಾಗುತ್ತಿರುವವರು ದೊಡ್ಡ ಜನ ಏನೂ ಕೊರತೆ ಬಾರದಂತೆ ಮದುವೆ ನಡೆಯಸಬೇಕು ಎಂದ.